ವ್ಯಾಸಂಗ ಬಿಟ್ಟು ಕೃಷಿಯತ್ತ ಮುಖ ಮಾಡಿ ಮಾದರಿಯಾದ ಯುವಕ ಚಂದ್ರಶೇಖರ್

ವಾಣಿಜ್ಯ ಬೆಳೆ ಬೆಳೆದು ಲಾಭ ಗಳಿಸಿದ ರೈತ

ಮಾಗಡಿ: ತಾಲೂಕಿನ ಸೋಲೂರು ಹೋಬಳಿ ಮರೀಕುಪ್ಪೆ ಗ್ರಾಮದ ಯುವ ಉತ್ಸಾಹಿ ರೈತ ಎಂ.ಜಿ.ಚಂದ್ರಶೇಖರ್ ಹೆಚ್ಚು ಸಂಬಳ ಬರುವ ಉದ್ಯೋಗವನ್ನು ಬಿಟ್ಟು ಬಂದು ಯುವ ರೈತರಾಗಿ ಮಾಗಡಿಯಲ್ಲಿ ಹೆಸರು ಗಳಿಸಿದ್ದಾರೆ.

ಎಂ.ಜಿ.ಚಂದ್ರಶೇಖರ್ ಡಿಪ್ಲೋಮಾವರೆಗೂ ವ್ಯಾಸಂಗ ಮಾಡಿದ್ದು, ಪ್ರಾರಂಭದಲ್ಲಿ ಬೆಂಗಳೂರಿನಲ್ಲಿ ಒಂದು ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಉನ್ನತ ವೇತನವಿದ್ದರೂ 2020ರ ಕೋವಿಡ್ ಸಮಯದಲ್ಲಿ ಇವರು ತಮ್ಮ ತಂದೆಯೊಡನೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರಿಂದ, ಬೆಂಗಳೂರಿನ ಉದ್ಯೋಗಕ್ಕೆ ರಾಜೀನಾಮೆ ನೀಡಿ ಕೃಷಿಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡರು. ತಮ್ಮ ತಂದೆಯವರು ಮಾಡುತ್ತಿದ್ದ ಸಾಂಪ್ರಾದಾಯಿಕ ಕೃಷಿಯಲ್ಲಿ ಹೆಚ್ಚಿನ ಲಾಭ ಸಾಧ್ಯವಿಲ್ಲವೆಂಬುದನ್ನು ಗಮನಿಸಿ, ಕೃಷಿಯಲ್ಲಿ ನವೀನ ತಂತ್ರಜ್ಞಾನಗಳು, ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು ಕೃಷಿ ಮಾಡಿದಾಗ ಕಡಿಮೆ ಖರ್ಚನ್ನು ಮಾಡಿ ಹೆಚ್ಚಿನ ಲಾಭ ಪಡೆಯಬಹುದೆಂದು ಅರಿತರು. ಕೃಷಿಯಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಕೆ, ಪ್ಲಾಸ್ಟಿಕ್ ಹೊದಿಕೆಯ ಅಳವಡಿಕೆ, ನೇರ ಮಾರುಕಟ್ಟೆ ಜೈವಿಕ ಗೊಬ್ಬರಗಳು ಮತ್ತು ಸಸ್ಯ ಪೋಷಕಗಳ ಬಳಕೆ, ವಿದೇಶಿ ತರಕಾರಿಗಳನ್ನು ಬೆಳೆಯುವುದು, ಕೆಸ ಮಾಡಿದ ತರಕಾರಿಗಳನ್ನು ಬೆಳೆಯುವುದು, ಸಾಮಾಜಿಕ ಜಾಲತಾಣಗಳ ಮುಖೇನ ಮಾರುಕಟ್ಟೆ ಹಾಗೂ ಇತರೆ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ.

ಎಂ.ಜಿ.ಚಂದ್ರಶೇಖರ್ ತಮಗಿರುವ 3.25 ಎಕರೆ ಜಮೀನಿನಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಒತ್ತು ನೀಡಿ ಸಮಗ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡು ಒಬ್ಬ ಪ್ರಗತಿ ಪರ ಉತ್ಸಾಹಿ ಯುವ ರೈತರಾಗಿದ್ದಾರೆ. ಕೃಷಿ ಬೆಳೆಗಳಲ್ಲಿ ರಾಗಿ, ತೊಗರಿ, ಅರಣ್ಯ ಕೃಷಿಯಲ್ಲಿ ತೇಗ, ಹೆಬ್ಬೇವು ಮರಗಳನ್ನು ಬೆಳೆದಿದ್ದಾರೆ. ಅಲ್ಲದೇ ವಾಣಿಜ್ಯ ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ, ಹಣ್ಣಿನ ಬೆಳೆಗಳಾದ ಮಾವು, ಬಾಳೆ, ತರಕಾರಿ ಬೆಳೆಗಳಾದ ಹಾಗಲ, ಸೋರೆ, ಎಲೆಕೋಸು, ಹೂಕೋಸು, ಟೊಮೆಟೊ, ಬೂದುಕುಂಬಳ, ಜುಕಿನಿ, ಹೂವಿನ ಬೆಳೆಗಳಾದ ಸೇವಂತಿಗೆ, ಇತ್ಯಾದಿಗಳನ್ನು ಆಧುನಿಕ ಪದ್ಧತಿಗಳನ್ನು ಅನುಸರಿಸಿ ಬೆಳೆಯುತ್ತಿದ್ದಾರೆ.

ಶಾಲೆಗಳಲ್ಲಿ ಕೃಷಿ ಬಗ್ಗೆ ಅರಿವು

ತಮ್ಮ ತಂದೆಯವರು ಕೃಷಿ ಮಾಡುತ್ತಿದ್ದಾಗ ಕೃಷಿಯಿಂದ ವಾರ್ಷಿಕವಾಗಿ 50-60 ಸಾವಿರ ರೂ.ಗಳನ್ನು ಗಳಿಸುತ್ತಿದ್ದು, ಸಮಗ್ರ ಕೃಷಿಯಿಂದ ಮತ್ತು ತಂತ್ರಜ್ಞಾನಗಳ ಅಳವಡಿಕೆಯಿಂದ ಪ್ರಸ್ತುತ ವಾರ್ಷಿಕವಾಗಿ 7 ರಿಂದ 8 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಇವರು ಉತ್ಸಾಹಿ ಯುವ ಕೃಷಿಕರಾಗಿದ್ದು, ಶಾಲೆಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ವಿಶೇಷವಾಗಿ ಕೃಷಿ ವಿಷಯದ ಬಗ್ಗೆ ಅರಿವು ಮೂಡಿಸುತ್ತಾ ಬಂದಿದ್ದು ಇತರೆ ರೈತರಿಗೆ ಮಾದರಿಯಾಗಿದ್ದಾರೆ.



ಸಾವಯವ, ನೈಸರ್ಗಿಕ ಕೃಷಿಗೆ ಒತ್ತು

ಚಂದ್ರಶೇಖರ್ ಭೂಮಿಯ ಸಮರ್ಪಕ ಬಳಕೆಗಾಗಿ ಹಾಗೂ ಅಭಿವೃದ್ಧಿಗಾಗಿ ವಿವಿಧ ಬೆಳೆ ಪದ್ಧತಿಗಳಾದ ಅಂತರಬೆಳೆ, ಮಿಶ್ರ ಬೆಳೆ, ಮೇವಿನ ಬೆಳೆ ಮಾಡುತ್ತಿದ್ದಾರೆ. ಸಾವಯವ ಕೃಷಿಗೆ ಮತ್ತು ನೈಸರ್ಗಿಕ ಕೃಷಿಗೆ ಹೆಚ್ಚು ಒತ್ತು ನೀಡಿ, ಸಾವಯವ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದು ಸಾವಯವ ಉತ್ಪನ್ನಗಳನ್ನು ಸಹಜ ಸಮೃದ್ಧ, ಏವಗಂಗ ಮತ್ತು ಸಾವನದುರ್ಗ ರೈತ ಉತ್ಪಾದಕ ಕಂಪನಿಗಳ ಮುಖಾಂತರ ಗ್ರಾಹಕರಿಗೆ ನೇರ ಮಾರುಕಟ್ಟೆ ಮಾಡುತ್ತಿದ್ದಾರೆ ಹಾಗೂ ವಿವಿಧ ಸಂಘ ಸಂಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.

Hosadiganta pg 01 & 03

ಉತ್ಪಾದನಾ ವೆಚ್ಚ ಕಡಿತಗೊಳಿಸಿ ಆದಾಯ ವೃದ್ಧಿ ಕಡೆ ಗಮನಹರಿಸಿ: ರೈತರಿಗೆ ಮೋದಿ


ಗುಂಪು ಕೃಷಿ ಮಾಡಿ

ಹೊಸದಿಲ್ಲಿ: ದೇಶದಲ್ಲಿ ರೈತರು ಗುಂಪು ಕೃಷಿಯಲ್ಲಿ ತೊಡಗಿಕೊಳ್ಳಬೇಕು. ಸಣ್ಣ ಮತ್ತು ಅತಿ ಸಣ್ಣ ರೈತರು ಹೆಚ್ಚಿನ ಮೌಲ್ಯದ ಬೆಳೆಗಳನ್ನು ಬೆಳೆದು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ತಮ್ಮ ಭೂಮಿಯನ್ನು ಒಟ್ಟುಗೂಡಿಸಿ ಒಟ್ಟಾಗಿ ಸಾಮೂಹಿಕ ಕೃಷಿಯಲ್ಲಿ ತೊಡಗಿಕೊಳ್ಳಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರು ರೈತರಿಗೆ ಕರೆ ನೀಡಿದ್ದಾರೆ.

ಅವರು ಹೊಸದಿಲ್ಲಿಯಲ್ಲಿ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (ಐಎಆರ್‌ಐ)ಯಲ್ಲಿ ಸೋಮವಾರ ರೈತರೊಂದಿಗೆ ನಡೆಸಿದ ಸಂವಾದದ ವೇಳೆ, ರೈತರು ಉತ್ಪಾದನಾ ವೆಚ್ಚ ಕಡಿಮೆಗೊಳಿಸಿ ಆದಾಯ ಹೆಚ್ಚಿಸುವತ್ತ ಗಮನ ಹರಿಸಬೇಕೆಂದು ಕಿವಿಮಾತು ಹೇಳಿದರು. ಅವರು ದೇಶದ ರೈತರಿಗಾಗಿ 35,440 ಕೋಟಿ ರೂ.ಗಳ 2 ಮಹತ್ವದ ಯೋಜನೆ ಉದ್ಘಾಟಿಸುವುದಕ್ಕೆ ಮುನ್ನ ರೈತರೊಂದಿಗೆ ಈ ಸಂವಾದ ನಡೆಸಿದರು. ಇದರಲ್ಲಿ 24 ಸಾವಿರ ಕೋಟಿ ರೂ.ಗಳ ಪಿಎಂ ಧನ ಧಾನ್ಯ ಕೃಷಿ ಯೋಜನಾ ಮತ್ತು 11,440 ಕೋಟಿ ರೂ.ಗಳ ಧಾನ್ಯಗಳ ಆತ್ಮನಿರ್ಭರತಾ ಮಿಷನ್ ಸೇರಿದೆ.

ಮಧ್ಯಪ್ರದೇಶದ ಜಬಲ್ಪುರದ ಯುವ ಉದ್ಯಮಿಯೊಬ್ಬರು ತಮ್ಮ ಏರೋಪೋನಿಕ್ ಆಧಾರಿತ ಆಲೂಗಡ್ಡೆ ಬೀಜ ಕೃಷಿಯನ್ನು ಪ್ರದರ್ಶಿಸಿದರು. ಅಲ್ಲಿ ಆಲೂಗಡ್ಡೆಯನ್ನು ಮಣ್ಣಿಲ್ಲದೆಯೇ ಲಂಬವಾದ ರಚನೆಗಳಲ್ಲಿ ಬೆಳೆಯಲಾಗುವ ವಿಧಾನ ತೋರಿಸಲಾಯಿತು.

ಪುಟ 2



ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿ

ರೈತರು ಕ್ರಮೇಣವಾಗಿ ನೈಸರ್ಗಿಕ ಮತ್ತು ಪ್ರಾಯೋಗಿಕವಾದ ಕೃಷಿ ಪದ್ಧತಿಯನ್ನು ಅಳವಡಿಸಿ ಕೊಳ್ಳುವಂತೆ ಕೋರಿದರು. ರೈತರು ಇದನ್ನು ಹಂತ ಹಂತವಾಗಿ ಕೈಗೊಳ್ಳಬಹುದಾಗಿದೆ. ಭೂಮಿಯ ಒಂದು ಭಾಗದಲ್ಲಿ ನೈಸರ್ಗಿಕ ಕೃಷಿಯಲ್ಲಿ ತೊಡಗಿ ಪರೀಕ್ಷಿಸುವುದು ಮತ್ತು ಉಳಿದ ಭಾಗದಲ್ಲಿ ಸಾಂಪ್ರದಾಯಿಕ ವಿಧಾನಗಳನ್ನು ಮುಂದುವರಿಸುವುದು.

ಪುಟ 2

ಗುಂಪು ಕೃಷಿ ಮಾಡಿ

ಪುಟ ೧ ಈ ವಿಧಾನ ವೀಕ್ಷಿಸಿದ ಮೋದಿಯವರು, ಬೇರು ತರಕಾರಿಗಳನ್ನು ಸ್ವೀಕರಿಸದ ಜೈನರ ಧಾರ್ಮಿಕ ಆಹಾರ ನಿರ್ಬಂಧ ಉಲ್ಲೇಖಿಸಿ 'ಜೈನ ಆಲೂಗಡ್ಡೆ' ಎಂದು ಕರೆದರು.

ಹರ್ಯಾಣದ ಹಿಸಾರ್ ಜಿಲ್ಲೆಯ ರೈತರೊಬ್ಬರು, ನಾಲ್ಕು ವರ್ಷಗಳ ಹಿಂದೆ ತಾನು ಆರಂಭಿಸಿದ ಕಾಬೂಲಿ ಕಡಲೆ ಬೆಳೆ ಕೃಷಿಯ ಬಗ್ಗೆ ತಿಳಿಸಿದರು. ಇಂದು ಪ್ರತಿ ಎಕರೆಗೆ 10 ಕ್ವಿಂಟಾಲ್ ಬೆಳೆ ತೆಗೆಯುತ್ತಿರುವುದಾಗಿ ಮಾಹಿತಿ ನೀಡಿದರು. ಈ ಸಂದರ್ಭ ಅಂತರ್ ಬೆಳೆ ಪದ್ಧತಿಗಳ ಬಗ್ಗೆ, ವಿಶೇಷವಾಗಿ ಮಣ್ಣಿನ ಫಲವತ್ತತೆ ಹೆಚ್ಚಿಸಲು ಮತ್ತು ಹೆಚ್ಚುವರಿ ಆದಾಯ ಗಳಿಸಲು ದ್ವಿದಳ ಧಾನ್ಯದ ಬೆಳೆಗಳನ್ನು ಕೃಷಿ ವ್ಯವಸ್ಥೆಯಲ್ಲಿ ಸಂಯೋಜಿಸಲಾಗಿದೆಯೇ ಎಂಬುದಾಗಿ ಮೋದಿಯವರು ವಿಚಾರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರೈತ, ಅಂತಹ ಬೆಳೆಗಳನ್ನು ಸೇರಿಸಿಕೊಳ್ಳುವುದು ಪ್ರಯೋಜನಕಾರಿ ಎಂಬುದು ಸಾಬೀತಾಗಿದೆ ಎಂದರು.

ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿ

ಪುಟ ೧ ಈ ಮೂಲಕ ನೈಸರ್ಗಿಕ ಕೃಷಿಯಲ್ಲಿ ವಿಶ್ವಾಸ ವೃದ್ಧಿಸಿಕೊಳ್ಳಬಹುದಾಗಿದೆ ಎಂದು ಸಲಹೆಯಿತ್ತರು. ಈ ಸಂದರ್ಭ ವಿವಿಧ ರಾಜ್ಯಗಳಿಂದ ಬಂದ ಅನೇಕ ರೈತರು ತಮ್ಮ ಅನುಭವಗಳನ್ನು ಮೋದಿಯವರೊಂದಿಗೆ ಹಂಚಿಕೊಂಡರು.

ವಿ ರೈತ ಮಿತ್ರ



■ಸತತ ಮಳೆಯಿಂದಾಗಿ ಹರಳು ಗೊನೆಗಳು ಕೊಳೆಯುತ್ತಿದ್ದು, ಇದಕ್ಕೆ ಕಾರಣ ಮತ್ತು ಪರಿಹಾರವೇನು?

। ಕುಮಾರ್ ಆರ್.ಎಸ್. ಅದನೂರು, ಚಿತ್ರದುರ್ಗ

ಹರಳು ಕಂದು ಕೊಳೆರೋಗ ಕಂಡುಬಂದಲ್ಲಿ ಗೊನೆಗಳು ಕೊಳೆಯುವುದನ್ನು ಕಾಣಬಹುದು. ಸತತ ಮಳೆ, ಮೋಡದ ವಾತಾವರಣ, ಆರ್ದ್ರತೆ (75-90%) ಮತ್ತು ತಾಪಮಾನ (12ರಿಂದ 350)ಗಳಿಂದಾಗಿ ರೋಗದ ತೀವ್ರತೆ ಹೆಚ್ಚುತ್ತದೆ. ಹರಳು ಕಂದು ಕೊಳೆರೋಗವು ಬಲಿತ/ಮಾಗಿದ ಹರಳು ಕಾಯಿಗಳಿಗಿಂತ ಹೂ ಗೊಂಚಲು, ಎಳೆಯ ಹರಳು ಕಾಯಿಗಳನ್ನು ಹೆಚ್ಚಾಗಿ ಬಾಧಿಸುತ್ತದೆ.

ನಿರ್ವಹಣೆ: ಹಾನಿಗೊಳಗಾದ ತೆನೆಗಳನ್ನು ಸಂಗ್ರಹಿಸಿ ನಾಶಪಡಿಸಬೇಕು. ಜೈವಿಕ ಶಿಲೀಂಧ್ರ ನಾಶಕ ಟ್ರೈಕೋಡರ್ಮಾ ವಿರಿಡೆ (10 ಸ್ಪೋರ್ಸ್/ ಮಿ.ಲೀ.) ಮತ್ತು ಸೂಡೋಮೋನಸ್ ಫ್ಲೊರೆಸೆನ್ಸ್ (10 ಸಿ.ಎಫ್.ಯು/ಮಿ.ಲೀ.) ಸಿಂಪಡಣೆ ಮಾಡಬೇಕು. ಅವಶ್ಯವಿದ್ದಲ್ಲಿ ಪ್ರತಿ ಲೀಟರ್ ನೀರಿಗೆ 1.0 ಗ್ರಾಂ. ಕಾರ್ಬೆಂಡಜಿಮ್ ಅಥವಾ ಥೈಪನೇಟ್ ಮಿಥೈಲ್ ಬೆರೆಸಿ ಸಿಂಪಡಿಸಬೇಕು. ಸತತ ಮಳೆಗಳ ಮುನ್ಸೂಚನೆಯಿದ್ದಲ್ಲಿ ಪ್ರತಿ ಲೀಟರ್ ನೀರಿಗೆ 1.0 ಎಂ.ಎಲ್. ಪ್ರೋಪಿಕೊನೊಜೊಲ್ ಮುಂಜಾಗ್ರತೆ ಕ್ರಮವಾಗಿ ಸಿಂಪಡಿಸಬೇಕು.

। ಡಾ. ಯಮನೂರ ತಳಿ ವಿಜ್ಞಾನಿ (ಹರಳು)

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani Pg 07

ರಾಗಿ, ಭತ್ತ ಖರೀದಿಗೆ ನೋಂದಣಿ ಆರಂಭ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆಯಡಿ ಭತ್ತ ಮತ್ತು ರಾಗಿ ಖರೀದಿಸಲು ರೈತರಿಂದ ನೋಂದಣಿ ಪ್ರಕ್ರಿಯೆ ಆರಂಭಿಸಲಾಗಿದೆ. ಖರೀದಿ ಮತ್ತು ಸಂಗ್ರಹಕ್ಕಾಗಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ರೈತ ಉತ್ಪಾದಕ ಸಂಸ್ಥೆಗಳ ನೆರವು ಪಡೆಯಲು ನಿರ್ಧರಿಸಿದೆ.

ಭತ್ತ ಖರೀದಿಗೆ ಅಕ್ಟೋಬರ್ ಮೊದಲ ವಾರದಿಂದ ನೋಂದಣಿ ಆರಂಭಿಸಲಾಗಿದೆ. ನವೆಂಬರ್ ತಿಂಗಳಲ್ಲಿ ಖರೀದಿ ಆರಂಭಿಸಲಾಗುವುದು. ಭತ್ತದ ಖರೀದಿಗೆ ಯಾವುದೇ ಮಿತಿಯಿಲ್ಲ. ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಭತ್ತವನ್ನು ಬೆಳೆದಿರುವ ಹಿಡುವಳಿಯ ಮಿತಿಗೆ ಒಳಪಟ್ಟು ಯಾವುದೇ ಗರಿಷ್ಠ ಮಿತಿಯಲ್ಲದೆ ರೈತರ ಹಿಡುವಳಿ ಹಾಗೂ ಬೆಳೆ ದಾಖಲೆಗಳ ದೃಢೀಕರಣದ ಆಧಾರದ ಮೇಲೆ ಲಭ್ಯವಾಗುವ ಭತ್ತವನ್ನು ಖರೀದಿಸಲಾಗುತ್ತದೆ.

ಪ್ರಾಥಮಿಕ ಕೃಷಿ ಕ್ರೆಡಿಟ್ ಸೊಸೈಟಿ (ಪ್ಯಾಕ್ಸ್) ಮತ್ತು ಸ್ವಸಹಾಯ ಸಂಘಗಳನ್ನು ಬಳಸಿಕೊಳ್ಳಲು ಸರಕಾರ ನಿರ್ಧರಿಸಿತ್ತು. ಆದರೆ, ಸ್ವಸಹಾಯ ಸಂಘಗಳು ಒಮ್ಮತ ಸೂಚಿಸದ ಹಿನ್ನೆಲೆಯಲ್ಲಿ ಈಗ ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ)ಗಳ ಮೊರೆ ಹೋಗಿದೆ. ಇದರೊಂದಿಗೆ ಪ್ಯಾಕ್ಸ್ ನೆರವು ಕೂಡ ಪಡೆಯಲು ಉದ್ದೇಶಿಸಲಾಗಿದೆ.

ಈ ಹಿಂದೆ ಕೃಷಿ ಮಾರಾಟ ಮಂಡಳಿ, ಕರ್ನಾಟಕ ಸಹಕಾರ ಮಾರಾಟ ಮಂಡಳಿ, ಕರ್ನಾಟಕ ಆಹಾರ ನಿಗಮಗಳನ್ನು ಖರೀದಿ ಏಜೆನ್ಸಿಗಳನ್ನಾಗಿ ನಿಯೋಜಿಸಲಾಗಿತ್ತು. ಆದರೆ ಈ ಬಾರಿ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವೇ ಮುಖ್ಯ ಏಜೆನ್ಸಿಯಾಗಿರಲಿದ್ದು, ಪ್ಯಾಕ್ಸ್ ಮತ್ತು ಎಫ್‌ಪಿಒಗಳ ಮುಖೇನ ಬೆಂಬಲ ಬೆಲೆಯಡಿ ಖರೀದಿಸಿ, ಸಂಗ್ರಹಿಸಲಿದೆ.

ಪ್ರತಿ ವರ್ಷವೂ ನೋಂದಣಿ ವಿಳಂಬವಾಗುತ್ತಿತ್ತು. ಜತೆಗೆ, ಖರೀದಿ ಪ್ರಕ್ರಿಯೆಯೂ ತಡವಾಗುತ್ತಿತ್ತು. ಈ ಬಾರಿ ಆ ರೀತಿ ಸಮಸ್ಯೆಯಾಗದಂತೆ ನಿಗಾವಹಿಸಲು ನಿಗಮ ಕಾರ್ಯಪ್ರವೃತ್ತವಾಗಿದೆ ಎಂದು ನಿಗಮದ ವ್ಯವಸ್ಥಾಪಕರು ತಿಳಿಸಿದ್ದಾರೆ.

V-karantaka Pg 03

Dec Hrd Pg 03

COST EFFECTIVE

Now, a tractor in size & ease of a bike to help small farmers

Quad vehicle reaches corners, interiors for tilling, deweeding

NRUPATHUNGA S K
SHIVAMOGGA, DHNS

A city-based startup has designed the first India-made four-wheeler quad bike priced around Rs 2.5 lakh to help small and marginal farmers who can't afford to buy tractors.

Vishwanath K S, founder and director of Farmland Industries India Private Limited and engineering graduate from Shivamogga, has sold over 100 such bikes to small farmers in the state in the last four years. Now, he is getting orders from Andhra Pradesh, Telangana and Tamil Nadu.

Vishwanath told *DH* that earlier, quad bikes were imported from China and Japan.

"I made up my mind to create a quad bike, while I was doing my engineering degree in 2015. I had created three-wheeler bikes for the army and films. Later, I thought of manufacturing four-wheeler bikes exclusively for small farmers." He said the first bike was sold to a farmer in Shivamogga in 2016.



The quad vehicle, developed by Shivamogga-based engineer Vishwanath K S, has a detachable trolley capable of carrying 500 to 800 kg. The model is expected to ease labour shortages and make fertiliser and manure application convenient.

"I had manufactured it in my house itself. I borrowed money from my friends and parents, initially. Later, I started taking money from customers as advance, manufactured the bike and sold the product to them. This year, IIT Madras has bought 1% share in my company by paying Rs 10 lakh. UAS Dharwad has given a grant of Rs 10 lakh," the entrepreneur said.

The quad bike can easily navigate in plantations and perform essential farm tasks, where tractors and tillers are difficult to reach.

Equipped with a trolley attachment capable of carrying 500 to 800 kg, the quad bike is expected to ease labour shortages and make application of fertilisers and manure easy for farmers.

Conventional tractors and tillers cost Rs 8 lakh to Rs 10 lakh and Vishwanath's invention gives farmers the cost advantage.

Farmers usually spend Rs 3,000 per acre to remove weeds from their fields. but the quad bike performs the task at a much lesser cost. It can easily reach the corners and interiors of agriculture fields.

Vishwanath said last year, the startup saw a business of nearly Rs 1 crore by selling around 40 vehicles. It plans to set up production units in tier-2 and tier-3 cities, creating employment opportunities for people. Over 10 workers presently work out of the unit on Sagar Road in Shivamogga.